# ಬಹುಬೆಳೆಗೆ ಪದ್ಧತಿ ರೂಢಿಸಿಕೊಳ್ಳಿ: ಸ್ವರ್ಣವಲ್ಲೀ ಶ್ರೀ

ಯಲ್ಲಾಪುರ: ಪರಸ್ಪರ ಎಂಬ ಶಬ್ದವೇ ಸಹಕಾರಿ ಸಂಘಗಳ ಮೂಲವಾಗಿದೆ. ಸಂಘದಿಂದ ಗ್ರಾಹಕರಿಗೆ, ಗ್ರಾಹಕರಿಂದ ಸಂಘಕ್ಕೆ ವ್ಯಾಪಾರ ವ್ಯವಹಾರಗಳು ನಿರಂತರವಾದಾಗ ಪರಸ್ಪರ ಏಳ್ಗೆಯನ್ನು ಕಾಣಬಹುದು ಎಂದು ಸ್ವರ್ಣವಲ್ಲೀ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ನುಡಿದರು.

ತಾಲೂಕಿನ ಉಮಚಗಿ ಸೇವಾ ಸಹಕಾರಿ ಸಂಘದ ಶತಮಾನೋತ್ಸವ ಸಮಾರಂಭದ ಉದ್ಘಾಟನಾ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಸಮಾಜದ ಉಳಿವಿನ ಬಗ್ಗೆ ಎಲ್ಲೆಡೆ ಚಿಂತನೆಗಳು ನಡೆಯುತ್ತಿವೆ. ಸಮಾಜದ ಉಳಿವು ಸಂಸ್ಕಾರ ಉಳಿಸಿಕೊಂಡು ಆಗಬೇಕಿದೆ. ಮನೆಯೊಳಗೆ 5 ದೇವರು, ಮನೆ ಮುಂದೆ 5 ಕೃಷಿಗಳು ಒಟ್ಟಿಗೆ ಬೇಕು. ಅಂದಾಗ ಮಾತ್ರ ಜೀವನ ಸಾಧ್ಯ. ನಾವು ಕೇವಲ ಒಂದು ಬೆಳೆಯ ಮೇಲೆ ಅವಲಂಬಿತರಾದರೆ, ಮುಂದಿನ ಭವಿಷ್ಯದ ಕುರಿತು ಚಿಂತಿಸುವಂತೆ ಆಗುತ್ತದೆ.

ಆಧುನಿಕ ಸಮಾಜ ಕೃಷಿ ಇಂದ ದೂರವಾಗುತ್ತಿದ್ದಾರೆ. ನಮ್ಮ ಊರು ಸ್ವರ್ಗದಂತೆ. ಅದನ್ನು ತೊರೆದು ಹೊರ ಹೋಗುವವರ ಸಂಖ್ಯೆ ಹೆಚ್ಚಾಗಿದೆ. ನಮ್ಮ ಸಹಕಾರಿ ಸಂಘಗಳು ಯುವ ಜನತೆಗೆ ಅವಕಾಶಗಳನ್ನು ಒದಗಿಸುವತ್ತ ಯೋಜನೆಗಳನ್ನು ರೂಪಿಸಿಕೊಂಡರೆ ಜನ ಸಾಮಾನ್ಯರ ಜೀವನ ಉತ್ತಮವಾಗುತ್ತದೆ. ಹಳ್ಳಿಯ ಜಮೀನುಗಳು ಪರಭಾರೆಯಾದರೆ, ಅತ್ಯಂತ ದುಷ್ಪರಿಣಾಮಗಳನ್ನು ನಾವು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕ್ಯಾಂಪ್ಕೊ ನಿರ್ದೇಶಕ ಶಂಭುಲಿಂಗ ಹೆಗಡೆ ಮಾತನಾಡಿ, ಸಂಸ್ಕೃತಿ ಎನ್ನುವುದು ನಮ್ಮೆಲ್ಲರ ಜೀವನಾಡಿಯಲ್ಲಿದೆ. ಇಂತಹ ಸುಸಂಸ್ಕೃತ ಸದಸ್ಯರು ಸಹಕಾರಿ ಸಂಘಗಳ ಏಳ್ಗೆಗೆ ನೇರ ಕಾರಣೀಕರ್ತರು. ಕೂಲಿಕಾರರ ಕೊರತೆ, ಮಕ್ಕಳ ವಲಸೆ ಈ ಎಲ್ಲಾ ಪರಿಸ್ಥಿತಿಯ ನಡುವೆ ನಮ್ಮ ಪರಂಪರೆಯನ್ನು, ನಮ್ಮ ಕೃಷಿ ಹಾಗೂ ಜೀವನ ಶೈಲಿಯನ್ನು ಬೆಳೆಸಿಕೊಂಡು ಹೋಗುವುದು ಕಷ್ಟಕರ. ದೇಶದೆಲ್ಲೆಡೆ ಅಡಿಕೆ ಬೆಳೆಯಲಾಗುತ್ತಿರುವುದರಿಂದ ಮುಂದಿನ ನಮ್ಮ ಭಾಗದ ಕೃಷಿಕರ ಬದುಕು ಕಷ್ಟವಾಗಿದ್ದು, ಈ ಕುರಿತು ಎಚ್ಚೆತ್ತು ಮಿಶ್ರಬೆಳೆಯ ಕುರಿತು ಯೋಚಿಸುವ ಅಗತ್ಯವಿದೆ ಎಂದರು. ಮಾತಾ ಬ್ಯಾಂಕ್‌ನ ಅಧ್ಯಕ್ಷ ಜಿ.ಎನ್.ಹೆಗಡೆ ಹಿರೇಸರ ಮಾತನಾಡಿದರು. ಸಂಘದ ಅಧ್ಯಕ್ಷ ಎಂ.ಜಿ. ಭಟ್ ಸುಂಕದಗುಂಡಿ ಸ್ವಾಗತಿಸಿ, ಪ್ರಾಸ್ತಾವಿಕಗೈದರು. ಇದೇ ಸಂದರ್ಭದಲ್ಲಿ ಮಾತಾ ಬ್ಯಾಂಕ್ ನ ಅಧ್ಯಕ್ಷ ಜಿ.ಎನ್. ಹೆಗಡೆ ಹಿರೇಸರ ಹಾಗೂ ಕ್ಯಾಂಪ್ಕೊ ನಿರ್ದೇಶಕರಾದ ಶಂಭುಲಿಂಗ ಹೆಗಡೆ ಅವರನ್ನು ಮತ್ತು ಸಂಘದಲ್ಲಿ ಸದಸ್ಯರಾಗಿ ಕಾರ್ಯ ನಿರ್ವಹಿಸಿದ ಮಾಜಿ ಅಧ್ಯಕ್ಷರುಗಳನ್ನು ಹಾಗೂ ನೂತನ ಕಟ್ಟಡ ವಿನ್ಯಾಸಗೊಳಿಸಿದ ವಸಂತ ಭಟ್, ಶ್ಯಾಮ ಭಟ್ ಹಾಗೂಟಿ.ಎಸ್.ಭಟ್‌ಅವರನ್ನುಸನ್ಮಾನಿಸಲಾಯಿತು. ಎಂ.ಪಿ. ಹೆಗಡೆ ಚವತ್ತಿ ಉಪಸ್ಥಿತರಿದ್ದರು.



ತಾಲೂಕಿನ ಉಮಚಗಿ ಸೇವಾ ಸಹಕಾರಿ ಸಂಘದ ಶತಮಾನೋತ್ಸವ ಸಮಾರಂಭದ ಉದ್ಘಾಟನಾ ಸಮಾರಂಭದ ಸಾನಿಧ್ಯ ವಹಿಸಿ ಸ್ವರ್ಣವಲ್ಲೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳು ಆಶೀರ್ವಚನ ನೀಡಿದರು.